# ಉತ್ಪಾದನಾ ಅಂದಾಜಿಗಿಂತ ಸಕ್ಕರೆ ಉತ್ಪಾದನೆ ಇಳಿಕೆಯ ಸಾಧ್ಯತೆ ಹಾಗೂ ಸಕ್ಕರೆ ದರ ಹೆಚ್ಚಳ ಮುಂದುವರಿಕೆ

ಕ್ಜಾರ್ನಿಕೋನ್ ಕಯೋಡಿಟೀಸ್ ಹೌಸ್ ಜಗತಿಕ ಸಕ್ಕರೆ ಉತ್ಪಾದನಾ ಅಂದಾಜಿನಲ್ಲಿ 2015–16ರ ಜಾಗತಿಕ ಸಕ್ಕರೆ ಉತ್ಪಾದನಾ ಕೊರತೆ 11.4 ಮಿಲಿಯನ್ ಟನ್‌ಗಳೆಂದು ಹಿಂದಿನ ವಾರ ಅಂದಾಜಿಸಿದೆ. ಭಾರತದಲ್ಲಿ ಕೆಲವು ಸಕ್ಕರೆ ಕಾರ್ಖಾನೆಗಳು ಈಗಲೂ ಕಾರ್ಯಾಚರಿಸುತ್ತಿರುವುದರಿಂದ ಭಾರತದ ಈ ಸೀಸನ್‌ನ ಸಕ್ಕರೆ ಉತ್ಪಾದನೆ 25.6 ಮಿಲಿಯನ್ ಟನ್‌ಗಳಾಗಬಹುದೆಂದು ಕೆಲವು ವಿಶ್ಲೇಷಕರ ಅನಿಸಿಕೆ. ಹಿಂದಿನ ಸೀಜನ್‌ನಲ್ಲಿ ಭಾರತ 28.3 ಮಿಲಿಯನ್ ಟನ್ ಸಕ್ಕರೆ ಉತ್ಪಾದಿಸಿತ್ತು.

ಕಳೆದ 2 ವರ್ಷಗಳ ಸತತ ಬರಗಾಲದಿಂದ (2014–15) ಈ ಸೀಸನ್‌ನಲ್ಲಿ ಗಣನೀಯವಾಗಿ ಕಬ್ಬು ನಾಟಿಯ ಏಕರೇಜ್ ಇಳಿಕೆಯಾಗಿರುವುದರಿಂದ ಭಾರತದ ಮುಂದಿನ ಸೀಸನ್‌ನ ಸಕ್ಕರೆ ಉತ್ಪಾದನೆ 22.5 – 23 ಮಿಲಿಯನ್ ಟನ್‌ಗಳಿಗೆ ಇಳಿಕೆಯಾಗಬಹುದೆಂದು ಕೆಲವು ವಿಶ್ಲೇಷಕರ ಅಭಿಪ್ರಾಯವಾಗಿದೆಯೆನ್ನಲಾಗುತ್ತಿದೆ. ದೇಶದ ಅತೀ ಹೆಚ್ಚು ಉತ್ಪಾದಕ ರಾಜ್ಯವಾದ ಮಹಾರಾಷ್ಟ್ರದ ಸಕ್ಕರೆ ಉತ್ಪಾದನೆ ಹಿಂದಿನ ವರ್ಷದ 10.2 ಮಿಲಿಯನ್ ಟನ್‌ಗಳಿಂದ ಈ ವರ್ಷ 8.5 ಮಿಲಿಯನ್ ಟನ್‌ಗಳಿಗೆ ಹಾಗೂ ಮುಂದಿನ ವರ್ಷ 6.5 ಮಿಲಿಯನ್ ಟನ್‌ಗಳಿಗೆ ಇಳಿಕೆಯಾಗುವ ಸಂಭವವಿದೆಯೆನ್ನಲಾಗುತ್ತಿದೆ. ಇದು ದೇಶದ ಸಕ್ಕರೆ ಉತ್ಪಾದನೆ ಇಳಿಕೆಗೆ ಪ್ರಮುಖ ಕಾರಣವಾಗಿದ್ದು ಕರ್ನಾಟಕದಲ್ಲೂ ಉತ್ಪಾದನೆ ಗಣನೀಯ ಇಳಿಕೆಯಾಗಲಿದೆಯೆನ್ನಲಾಗುತ್ತಿದೆ.

ಬ್ರೆಜಿಲ್‌ನ ನಂತರ 2ನೇ ಜಾಗತಿಕ ಅತೀ ಹೆಚ್ಚು ಸಕ್ಕರೆ ಉತ್ಪಾದಕ ದೇಶವಾದ ಭಾರತದ ಸಕ್ಕರೆ ಉತ್ಪಾದನೆ ಇಳಿಕೆಯಾಗುವುದರಿಂದ ಜಾಗತಿಕ ಉತ್ಪಾದನೆ ಇಳಿಕೆ ಮತ್ತು ಹೆಚ್ಚಳವಾಗಿ ಸಕ್ಕರೆ ದರ ಹೆಚ್ಚಳ ಮುಂದಿನ ದಿನಗಳಲ್ಲಿ ಮುಂದುವರಿಯಲಿದೆಯೆನ್ನಲಾಗುತ್ತಿದೆ.

## ಸಕ್ಕರೆ ರಫ್ತು ಶೇ22 ಇಳಿಕೆ

ಎಪ್ರಿಲ್ 10ಕ್ಕೆ ಕೊನೆಗೊಂಡ ವಾರದಲ್ಲಿ 63900 ಟನ್‌ಗಳಷ್ಟು ಸಕ್ಕರೆ ರಫ್ತು ಮಾಡಲಾಗಿದೆ. ಹಿಂದಿನ ವಾರದಲ್ಲಿ 82300 ಟನ್ ಸಕ್ಕರೆ ರಫ್ತಾಗಿದ್ದು, ಶೇ22ರಷ್ಟು ಕಡಿತ ಸಂಭವಿಸಿದೆ.